

ಸ್ಟುವರ್ಟ್ ಕೋಪ್‌ಲ್ಯಾಂಡ್ ಜತೆ ರಿಕ್ಕಿ ಕೇಜ್

# ರಿಕ್ಕಿಗೆ ಮತ್ತೊಂದು ಗ್ರ್ಯಾಮಿ ಗರಿ

■ ಎನ್ವಿ

'ಬೆಸ್ಟ್ ಇಮ್ಮರ್ಸಿವ್ ಆಡಿಯೊ ಆಲ್ಬಂ' ಅರ್ಥಾತ್ ಧ್ವನಿಗಳ ಮೂಲಕ ಮುಳುಗುವಂತೆ ಮಾಡಬಲ್ಲ ಸಂಗೀತದ ಆಲ್ಬಂ ಎನ್ನುವ ವಿಭಾಗದಲ್ಲಿ ಬೆಂಗಳೂರಿನ ರಿಕ್ಕಿ ಕೇಜ್ ಅವರಿಗೆ ಮೂರನೇ ಸಲ ಗ್ರ್ಯಾಮಿ ಪ್ರಶಸ್ತಿ ಒಲಿದುಬಂದಿದೆ. ಕಳೆದ ವರ್ಷ 'ಬೆಸ್ಟ್ ನ್ಯೂ ಏಜ್ ಆಲ್ಬಂ' ವಿಭಾಗದ ಪ್ರಶಸ್ತಿ ಅವರದ್ದಾಗಿತ್ತು. ಆಗ ಅವರಿಗೆ ಪ್ರಶಸ್ತಿ ತಂದಿತ್ತಿದ್ದ 'ಡಿವೈನ್ ಟೈಡ್ಸ್' ಸರಣಿಯ ಆಲ್ಬಂಗಳೇ ಈ ಸಲವೂ ಪುರಸ್ಕಾರ ಸಲ್ಲಲು ಕಾರಣವಾಗಿವೆ.

ರಿಕ್ಕಿ ಅವರಿಗೆ ಗ್ರ್ಯಾಮಿ ಒಲಿಯುತ್ತಿರುವುದು ಇದು ಮೂರನೇ ಸಲ. 2015ರಲ್ಲಿ ಅವರ 'ವಿಂಡ್ಸ್ ಆಫ್ ಸಂಸಾರ' ಆಲ್ಬಂಗೆ ಮೊದಲ ಬಾರಿಗೆ ಪ್ರಶಸ್ತಿ ಸಂದಿತ್ತು. ಈ ಪ್ರತಿಷ್ಠಿತ ಪ್ರಶಸ್ತಿಗೆ ಮುತ್ತಿಕ್ಕುತ್ತಿರುವ ನಾಲ್ಕನೇ ಭಾರತೀಯ ಎನ್ನುವ ಗೌರವ ಅಷ್ಟೇ ಅಲ್ಲದೆ, ದೇಶದಲ್ಲೇ ಇಂತಹ ಸಾಧನೆ ಮಾಡಿದ ಕಿರಿಯ ಸಂಗೀತ ಪ್ರತಿಭೆ ಎನ್ನುವ ಗುಣವಿಶೇಷಣವೂ ಈಗ ಅವರದ್ದಾಗಿದೆ.

ಸಾಮಾನ್ಯವಾಗಿ ಸಂಗೀತ ಎಂದರೆ ಗಾಯನ–ವಾದ್ಯ ಸಂಯೋಜನೆ ಕೊಡುವ ಮುದದ ಅನುಭವ ಎಂದೇ ಬಹುತೇಕ ಭಾರತೀಯರ ಭಾವನೆ. ಆದರೆ, ಗ್ರ್ಯಾಮಿ ಪ್ರಶಸ್ತಿಯ ವಿವಿಧ ವಿಭಾಗಗಳಲ್ಲಿ ತೀರ್ಪುಗಾರರು ಪ್ರಶಸ್ತಿಗೆ ಪರಿಗಣಿಸುವ ಸಂಗತಿ ಇದೊಂದೇ ಅಲ್ಲ. 'ಬೆಸ್ಟ್ ಸರೌಂಡ್ ಸೌಂಡ್ ಆಲ್ಬಂ' ಎಂದು ಕೂಡ 'ಡಿವೈನ್ ಟೈಡ್ಸ್' ಅನ್ನು ಗ್ರ್ಯಾಮಿ ತೀರ್ಪುಗಾರರು ಹೊಗಳಿದ್ದಾರೆ.

ಪ್ರಕೃತಿಯಲ್ಲಿ ಸಹಜವಾಗಿ ಮೂಡುವ ಧ್ವನಿಗಳನ್ನು ಮುದ್ರಿಸಿಕೊಂಡು, ಸ್ಟುಡಿಯೊದಲ್ಲಿ ಅದಕ್ಕೆ ಹೊಂದುವಂತಹ ಹಲವು ವಾದ್ಯಗಳ ನಾದದಲೆಗಳ ಸಂಯೋಜನೆಯಿಂದ ಇಂತಹ ಸಂಗೀತವನ್ನು ಮೂಡಿಸಬಹುದು. 'ಡಿವೈನ್ ಟೈಡ್ಸ್' ಆಲ್ಬಂನಲ್ಲಿ ಇರುವುದು ಅಂಥದ್ದೇ ಸ್ವರ ಸಂಯೋಜನೆ. ಅಮೆರಿಕದ ಡ್ರಮ್ಸ್ ದಿಗ್ಗಜ ಸ್ಟುವರ್ಟ್ ಕೋಪ್‌ಲ್ಯಾಂಡ್ ಅವರೊಟ್ಟಿಗೆ ರಿಕ್ಕಿ ಈ ಆಲ್ಬಂ ಸಿದ್ಧಪಡಿಸಿದ್ದರು. 'ದಿ ಪೊಲೀಸ್' ಎಂಬ ಬ್ರಿಟಿಷ್ ರಾಕ್‌ಬ್ಯಾಂಡ್ ಅನ್ನು ಹುಟ್ಟುಹಾಕಿರುವ ಸ್ಟುವರ್ಟ್ ಕೋಪ್‌ಲ್ಯಾಂಡ್ ಅವರಿಗೀಗ 70 ವರ್ಷ ವಯಸ್ಸು. ಅವರಿಗೆ ಐದನೇ ಸಲ ಗ್ರ್ಯಾಮಿ ಪ್ರಶಸ್ತಿ ಸಂದಂತೆ ಆಗಿದೆ. ರಿಕ್ಕಿ ಬಾಲ್ಯದಿಂದಲೇ ಅವರ ಆರಾಧಕ.

ಕೋವಿಡ್ ವ್ಯಾಪಕವಾದ ಸಂದರ್ಭದಲ್ಲಿ ರಿಕ್ಕಿ ಹಾಗೂ ಕೋಪ್‌ಲ್ಯಾಂಡ್ ಇಬ್ಬರೂ ವಿಡಿಯೊ ಕರೆಗಳಿಂದಲೇ ಸಂವಹನ ನಡೆಸಿದ್ದರು. ಅಮೆರಿಕದ ಸ್ಟುಡಿಯೊದಲ್ಲಿ ಕೋಪ್‌ಲ್ಯಾಂಡ್ ವಾದ್ಯ ಸಂಯೋಜನೆ ಮಾಡಿದರೆ, ಭಾರತದಲ್ಲಿ ಅನೇಕ ಸಂಗೀತಗಾರರಿಂದ ರಿಕ್ಕಿ ಕೇಜ್ ಸ್ವರಗಳನ್ನು ಹೆಕ್ಕಿದ್ದರು. ಅಮೆರಿಕದ ಪಿಯಾನಿಸ್ಟ್ ಹರ್ಬರ್ಟ್ ವಾಲ್ಟ್ ಅವರಿಗೆ ಇದು ಮೂರನೇ ಗ್ರ್ಯಾಮಿ ಸಂತಸ. ಭಕ್ತಿಯ ಅಲೆಗಳಲ್ಲಿ ಅವರದ್ದೂ ಕಾಣ್ಕೆ ಇದೆ.

ರಿಕ್ಕಿ ಕೇಜ್ ತಮ್ಮ ಭಕ್ತಿಯ ಅಲೆಗಳು ಎನ್ನುವ ಅರ್ಥ ನೀಡುವ ತಮ್ಮ ಆಲ್ಬಂಗೆ 'ವಸುದೈವ ಕುಟುಂಬಕಂ' ಎನ್ನುವ ಧ್ಯೇಯವಿದೆ ಎಂದು ಹೇಳಿಕೊಂಡಿದ್ದರು. ಇಡೀ ವಿಶ್ವದ ಎಲ್ಲರೂ ಒಂದು ಕುಟುಂಬ ಎಂದು ಭಾವಿಸಿ. ಸಂಗೀತವನ್ನು ರೂಪಿಸುತ್ತಿರುವ ಅವರಿಗೆ ಸಹಜವಾಗಿಯೇ ಗ್ರ್ಯಾಮಿ ತಲುಪುವ ರಹದಾರಿಯ ಅರಿವೂ ಇದೆ.

ಗ್ರ್ಯಾಮಿ ಪ್ರಶಸ್ತಿಗೆ ಏನಿಲ್ಲವೆಂದರೂ 20 ಸಾವಿರ ಅರ್ಜಿಗಳು ಬರುತ್ತವೆ. ಅವುಗಳ ಪರವಾಗಿ ಲಾಬಿ ಮಾಡಲೆಂದೇ ಅಧಿಕೃತ ಏಜೆನ್ಸಿಗಳು ಇರುತ್ತವೆ. ಪರಿಗಣಿತವಾಗುವ ಆಲ್ಬಂಗಳಲ್ಲಿ ಶೇ ಅರ್ಧದಷ್ಟು ಧ್ವನಿ–ಶಬ್ದ–ಸಂಗೀತ ಎಲ್ಲವೂ ಹಿಂದಿನ ಐದು ವರ್ಷಗಳಲ್ಲಿ ಇಲ್ಲದ ರೀತಿಯಲ್ಲಿ ಹೊಸತೇ ಸಂಯೋಜನೆಯಾಗಿರಬೇಕು. ಹಾಗಿದ್ದರೆ ಮಾತ್ರ ಸ್ಪರ್ಧೆಯ ರೇಸ್‌ನಲ್ಲಿ ಆಲ್ಬಂ ಇರಲು ಸಾಧ್ಯ.

'ನನ್ನ ಸಂಗೀತ ವಿಶ್ವಮಾನ್ಯ ಎಂದೆನಿಸಿದರೂ ಅದರಲ್ಲಿ ಭಾರತೀಯತೆಯ ಬೇರುಗಳಿವೆ. ಇದು ಭಾರತಕ್ಕೆ ಹೆಮ್ಮೆಯ ವಿಷಯ ಎಂದೇ ನನ್ನ ಭಾವನೆ' ಎಂದು ರಿಕ್ಕಿ ಕೇಜ್ ಹೇಳಿರುವುದಕ್ಕೆ ಅರ್ಥವಿದೆ.

ಪ್ರತಿಕ್ರಿಯಿಸಿ: **feedback@sudha.co.in**